

# ಗೋಧಿ ಕಲಾಕಾರರು ಶತ್ರುಘ್ನ ಕಿಡಿ

‘ಗೋಧಿ ಕಲಾಕಾರ್ಸ್!’ ಹೀಗೊಂದು ವ್ಯಂಗ್ಯೋಕ್ತಿಯನ್ನು ನಟ ಶತ್ರುಘ್ನ ಸಿನ್ಹ ಮೊನ್ನೆ ಮೊನ್ನೆ ತೇಲಿಬಿಟ್ಟರು. ಶಾರುಖ್ ಖಾನ್ ಮಗ ಆರ್ಯನ್ ಮೇಲೆ ಡ್ರಗ್ಸ್ ಕಾರಣಕ್ಕೇ ಫೋಕಸ್ ಲೈಟ್ ಬಿದ್ದಿರುವ ಹೊತ್ತಿನ ಸಮಾಜೋ–ರಾಜಕೀಯ ಕುರಿತು ಶತ್ರುಘ್ನ ಸಂದರ್ಶನವೊಂದರಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ.

ಜನಪ್ರಿಯ ನಟ–ನಟಿಯರ ಹೆಸರುಗಳು ಮಾದಕದ್ರವ್ಯ ಜಾಲದಲ್ಲಿ ಕೇಳಿಬಂದರೆ, ಎಲ್ಲರ ಸುತ್ತ ಮಾತುಗಳು ಗಿರಕಿ ಹೊಡೆಯುವುದಿಲ್ಲ. ಇಂತಹ ವಿಷಯದಲ್ಲೂ ಆಯ್ಕೆ, ಆದ್ಯತೆಯ ಬಗೆಗೆ ಒಂದು ನಿರ್ದಿಷ್ಟ ಸಂಕಥನವನ್ನು ಸೃಷ್ಟಿಸಲಾಗುತ್ತಿದೆ. ಇದು ಕಳವಳಕಾರಿ ಎಂಬ ಧಾಟಿಯಲ್ಲಿ ಹಿರಿಯ ನಟ ಹೇಳಿರುವ ನುಡಿಗಳಲ್ಲಿ ಕೆಲವು ಪ್ರಶ್ನೆಗಳೂ ಅಡಗಿವೆ.

ಆರ್ಯನ್ ಅಲ್ಲದೆ ಈ ಪ್ರಕರಣದಲ್ಲಿ ಕೇಳಿಬಂದಿರುವ ಮೂನ್‌ಮೂನ್ ಧಮೇಚಾ, ಅರ್ಬಾಜ್ ಮರ್ಚೆಂಟ್ ತರಹದವರ ಮೇಲೆ ಫೋಕಸ್ ಲೈಟ್ ಯಾಕೆ ಬೀಳುತ್ತಿಲ್ಲ ಎನ್ನುವುದು ಶತ್ರುಘ್ನ ಸಿನ್ಹ ಅವರ ಮುಖ್ಯ ಪ್ರಶ್ನೆ. ಇಂತಹ ಪ್ರಕರಣಗಳಲ್ಲಿ ಪರೀಕ್ಷೆಗೆ ಮೂತ್ರ ಸಂಗ್ರಹಿಸುವುದು ರೂಢಿ. ಈ ಪ್ರಕರಣದಲ್ಲಿ ಹಾಗೆ ಮಾಡದೇ ಇದ್ದಿದ್ದು ಯಾಕೆ ಎನ್ನುವುದೂ ಅವರ ಅನುಮಾನದ ನುಡಿ. ಮಾದಕದ್ರವ್ಯ ಜಾಲದ ಭಾಗವೇ ಆಗಿರುವ ಒಬ್ಬನು ಎನ್‌ಸಿಬಿಯಲ್ಲಿ ಲೀಲಾಜಾಲವಾಗಿ ಓಡಾಡಿಕೊಂಡು ಇದ್ದ ಎನ್ನುವ ಸುದ್ದಿಗೂ ಸಿನ್ಹ ಅಡಿಗೆರೆ ಎಳೆಯುತ್ತಾರೆ.

ಇಂತಹ ಪ್ರಕರಣಗಳೆಲ್ಲ ಕಣ್ಣಿಗೆ ಕಾಣುವಷ್ಟು ಅಥವಾ ಸಾಮಾಜಿಕ ಜಾಲತಾಣದಲ್ಲಿ ಬಿತ್ತರಗೊಳ್ಳುವಷ್ಟು ಸರಳವಾಗಿರುವುದಿಲ್ಲ. ಹಿಂದೆ ಮಾದಕದ್ರವ್ಯ ಜಾಲದಲ್ಲಿ ಕೆಲವರ ಹೆಸರುಗಳು ಕೇಳಿಬಂದಿದ್ದವು. ಆಗ ದೀಪಿಕಾ ಪಡುಕೋಣೆ ಮೇಲೆ ಕ್ಯಾಮೆರಾ ಬೆಳಕು ಬೀಳತೊಡಗಿದ್ದೇ ಹೆಚ್ಚು. ಈ ರೀತಿ ‘ಸೆಲೆಕ್ಟಿವ್’ ಆಗಿ ವರ್ತಿಸುವ, ಪ್ರಕರಣಗಳನ್ನು ಭೇದಿಸುವ ಬಗೆಯೇ ಪ್ರಶ್ನಾರ್ಹ ಎನ್ನುತ್ತಾರೆ ಶತ್ರುಘ್ನ ಸಿನ್ಹ.

ಹಿಂದಿ ಚಿತ್ರರಂಗದ ಅನೇಕರು ಶಾರುಖ್ ಖಾನ್ ಮಗನ ಸ್ಥಿತಿಯ ಬಗೆಗೆ ಅನುಕಂಪ–ಸಾಂತ್ವನದ ಮಾತುಗಳನ್ನಾಡಿದ್ದಾರೆ. ಇನ್ನು ಕೆಲವರು ಇದೇ ಸಮಯ ಎಂದು ಮಾತಿನ ಕತ್ತಿ ಬೀಸಲೂ ಹಿಂದೇಟು ಹಾಕುತ್ತಿಲ್ಲ. ಇಂತಹ ಸ್ಥಿತಿ–ಗತಿಯ ಕುರಿತು ಶತ್ರುಘ್ನ ಅವರಿಗೆ ಹೇವರಿಕೆ ಮೂಡಿದೆ. ಮೇಲಾಗಿ ಅವರು ರಾಜಕಾರಣಿಯೂ ಹೌದಲ್ಲವೆ? ಅವರ ಪ್ರಶ್ನೆಗಳು ಅರ್ಥವತ್ತಾಗಿವೆ ಎಂದು ಅನುಮೋದಿಸುತ್ತಿರುವವರೂ ಕಡಿಮೆಯೇನಿಲ್ಲ. ಪ್ರಜಾಪ್ರಭುತ್ವದಲ್ಲಿ ಹೀಗೆ ಭಿನ್ನ ದನಿಗಳು ಹೊಮ್ಮುವುದು ಸ್ವಾಗತಾರ್ಹವೇ ಸರಿ.

■ ವಿಶಾಖ ಎನ್.

# ಶ್ರಿಯಾಗೆ ತಾಯ್ತನದ ಸಂಭ್ರಮ

ನಟಿ ಶ್ರಿಯಾ ಸರಣ್ ಅವರೀಗ ಹೆಣ್ಣುಮಗುವಿನ ತಾಯಿ. ಸ್ಪೇನ್‌ನಲ್ಲಿ ಪತಿ ಆ್ಯಂಡ್ರಿ ಕೊಶ್ಚೀವ್ ಜತೆ ನೆಲೆಸಿರುವ ಅವರು, ಭಾರತಕ್ಕೆ ಸದ್ಯದಲ್ಲೇ ಸ್ಥಳಾಂತರಗೊಳ್ಳುವ ಸುದ್ದಿಯನ್ನೂ ನೀಡಿದ್ದಾರೆ.

‘ಒಂದೂವರೆ ವರ್ಷಗಳಿಂದ ಇಡೀ ವಿಶ್ವ ಕೋವಿಡ್ ಆತಂಕದ ಮೋಡದ ಕೆಳಗೆ ಬದುಕಿತು. ನಾವೂ ನಮ್ಮದೇ ಸಾಹಸಗಳಿಗೆ ಒಡ್ಡಿಕೊಳ್ಳುತ್ತಾ, ಮಗು ಪಡೆಯುವ ಕನಸಿಗೆ ರೆಕ್ಕೆಪುಕ್ಕ ಹಚ್ಚಿದೆವು. ಈಗ ರಾಜಕುಮಾರಿ ಹುಟ್ಟಿದ್ದಾಳೆ. ತಾಯಿಯಾಗುವುದು ಸಂಭ್ರಮದ ಕ್ಷಣ. ನಾನು ಆ ಪ್ರಕ್ರಿಯೆಯನ್ನು ಸುಖಿಸಿದ್ದೇನೆ. ಹೊರಗೆ ಜಗತ್ತಿನ ತಲ್ಲಣಗಳನ್ನು ಕಂಡಾಗಲೆಲ್ಲ ಕಣ್ತುಂಬಿಕೊಳ್ಳುತ್ತಿತ್ತು. ಒಳಗೆ ಮಗಳ ಸಣ್ಣ ಕದಲಿಕೆ ಬದುಕಿನ ಕುರಿತು ಭರವಸೆ ಮೂಡಿಸುತ್ತಿತ್ತು. ಯಾವುದೋ ಬೆಳಕೊಂದಕ್ಕೆ ಜನ್ಮ ನೀಡಿದ್ದೇನೆಂಬ ಹೆಮ್ಮೆ ಇದೆ’ ಎಂದು ಶ್ರಿಯಾ ಹೆಮ್ಮೆಯಿಂದ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

‘ದೃಶ್ಯಂ’ ಚಿತ್ರದಲ್ಲಿ ನಟಿಸಿದ್ದ ಅವರು, ರಾಜಮೌಳಿ ನಿರ್ದೇಶನದ ‘ಆರ್‌ಆರ್‌ಆರ್’ನಲ್ಲೂ ಬಣ್ಣಹಚ್ಚಿದ್ದಾರೆ.

ರಷ್ಯಾದ ಆ್ಯಂಡ್ರಿ ಕೊಶ್ಚೀವ್ ಅವರನ್ನು ಕೆಲವು ವರ್ಷಗಳ ಹಿಂದೆ ಮಾಲ್ಡೀವ್ಸ್‌ನಲ್ಲಿ ಭೇಟಿಯಾಗಿದ್ದ ಶ್ರಿಯಾ, ಆಮೇಲೆ ಪ್ರೇಮಾಂಕುರವಾದ ಸಂಗತಿಯನ್ನು ಗುಟ್ಟಾಗಿ ಇಟ್ಟಿದ್ದರು. 2018ರಲ್ಲಿ ಉದಯಪುರದಲ್ಲಿ ಆಡಂಬರದಿಂದಲೇ ಮದುವೆಯಾಗಿದ್ದರು. 2021ರಲ್ಲಿ ಮಗುವಿನ ತಾಯಿಯಾಗಿದ್ದಕ್ಕೆ ಹೆಮ್ಮೆ ಪಡುತ್ತಿರುವ ಶ್ರಿಯಾ ‘ಈ ವರ್ಷ ಮರೆಯಲಾಗದ್ದು’ ಎನ್ನುತ್ತಾ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುತ್ತಿದ್ದಾರೆ. ■

